ಸಾಕ್ಷಿಯನ್ನು ದಿನಾಂಕ **11-10-2023** ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರವಾಗಿ ಶ್ರೀ ಎನ್.ಕೆ. ವಕೀಲರಿಂದಃ**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು ನನ್ನ ಸಾಕ್ಷ್ಯದ ಹೇಳಿಕೆಯನ್ನು ಪ್ರಮಾಣಪತ್ರದ ರೂಪದಲ್ಲಿ ನನ್ನ ಹೇಳಿಕೆಯಂತೆ ತಯಾರಿಸಿ ಸಲ್ಲಿಸಿದ್ದು, ಅದರಲ್ಲಿರುವ ವಿಚಾರಗಳು ಸತ್ಯವಾಗಿರುತ್ತವೆ. ಸದರಿ ನನ್ನ ಪ್ರಮಾಣಪತ್ರದಲ್ಲಿರುವ ಸಹಿ ನನ್ನದೇ ಇರುತ್ತದೆ.

ನನ್ನ ವಾದಕ್ಕೆ ಪೂರಕವಾಗಿ ದಿನಾಂಕ 23-05-2021 ರಂದು ವಾದಿಯು ಅವರ ಮಗನಿಗೆ ಬರಕೊಟ್ಟ ಜನರಲ್ ಪವರ್ ಆಫ್ ಅಟಾರ್ನಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ದಿನಾಂಕ 04-06-1960 ರ ಖಂಡಿತ ಕ್ರಯಸಾಧನದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-2 ಎಂದು, ದಿನಾಂಕ 19-02-2009 ರ ರದ್ಧತಿ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ದಿನಾಂಕ 19-02-2009 ರ ರದ್ಧತಿ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ದಿನಾಂಕ 19-02-2009 ರ ರದ್ಧತಿ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು, ನಾಲ್ಕು ಪಹಣಿ ಪತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-6 ಎಂದು, 4 ಮ್ಯುಟೇಷನ್ ರಿಜಿಸ್ಟರ್ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-7 ಎಂದು, ದಾವಾ ಡಿ ಶೆಡ್ಯೂಲು ಆಸ್ತಿಗೆ ಸಂಬಂಧಪಟ್ಟ ನಾಲ್ಕು ಪಹಣಿ ಪತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-8 ಎಂದು ಗುರುತಿಸಲಾಯಿತು.

( ವಕೀಲರ ಕೋರಿಕೆ ಮೇರೆಗೆ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಲಾಯಿತು. )

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಾಕ್ಷಿಯ ಸಹಿ ವ್ಯ.ನ್ಯಾ ಮತು. ಪ್ರ.ದ.ನ್ಯಾದಂ.ಸುಳ್ಯ.ದ.ಕ.

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ, ದ.ಕ.

ಸಾಕ್ಷಿಯ ಸಹಿ ವ್ಯ.ನ್ಯಾ ಮತು. ಪ್ರ.ದ.ನ್ಯಾದಂ.ಸುಳ್ಯ.ದ.ಕ.